ದಿನಾಂಕಃ 21.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ವಾದಿ ಪರ ಶ್ರೀ . ಎಮ್. ಆರ್. ಬಿ ವಕೀಲರಿಂದಃ</u>**

ದಾವಾ ಆಸ್ತಿಗಳ ಪೈಕಿ ಸಿ ಟಿ ಎಸ್ ನಂಬರ 850, 858, 847ಬ, 936ಬ, ನೇದ್ದವುಗಳಿಗೆ ಸಂಬಂಧಿಸಿದಂತೆ ಮೃತ 3 ನೇ ಪ್ರತಿವಾದಿ, ನಾನು ಮತ್ತು 4 ನೇ ಪ್ರತಿವಾದಿ ಜಂಟಿಯಾಗಿ ನಗರಭೂಮಾಪಕರು, ಗೋಕಾಕರರಿವರಿಗೆ ದಿ.30.06.2014 ರಂದು ಸದರಿ ಆಸ್ತಿಗಳನ್ನು ನನ್ನ ಹಾಗೂ 4 ನೇ ಪ್ರತಿವಾದಿಯ ಹೆಸರಿಗೆ ಜಂಟಿಯಗಿ ಸಮಾಯಕದಲ್ಲಿ ದಾಖಲಿಸಲು ಅರ್ಜಿ ಕೊಟ್ಟಿದ್ದೇವು ಎಂದರೆ ನಿಜ. ಸಾಕ್ಷಿಗೆ ಸದರಿ ಅರ್ಜಿಯ ದೃಡಿಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದು,ಅದನ್ನು ಮುಖಾಭಿಲೇಯಾಗಿ ನಿಪಿ.32 ಎಂದು ಗುರುತಿಸಲಾಯಿತು. ನಿಪಿ.32 ರ ಅರ್ಜಿಯೊಂದಿಗೆ ನಮ್ಮ ಮದ್ಯೆ ಮಾಡಿಕೊಂಡ ವಾಟ್ನಿ ಪತ್ರವನ್ನು ಲಗತ್ತಿಸಿದ್ದೇವು ಎಂದರೆ ನಿಜ. ಸಾಕ್ಷಿಗೆ ಸದರಿ ವಾಟ್ನಿ ಪತ್ರದ ದೃಡಿಕೃತ ನಕಲನ್ನು ತೋರಿಸಲಾಗಿ, ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದರಿಂದ ಅದನ್ನು ಮುಖಾಭಿಲೇಯಾಗಿ ನಿಪಿ.33 ಎಂದು ಗುರುತಿಸಲಾಯಿತು. ನಾನು ಮತ್ತು 4 ನೇ ಪ್ರತಿವಾದಿಯರು ನೊಂದಾಗದ ವಾಟ್ನಿ ಪತ್ರದ ಆಧಾರದ ಮೇಲೆ ಹೇಳಿದ ಆಸ್ತಿಗಳಿಗೆ ಸಂಬಂಧಿಸಿದಂತೆ ನಮ್ಮ ಹೆಸರುಗಳನ್ನು ದಾಖಲಿಸಿಕೊಂಡಿರುತ್ತೇವೆ ಎಂದರೆ ನಿಜ. ಸದರಿ ನಿಪಿ33 ಕ್ಕೆ ನಮ್ಮನ್ನು ಹೊರತುಪಡಿಸಿ ಉಳಿದ ವಾದಿ ಮತ್ತು ಪ್ರತಿವಾದಿಯರು ಪಕ್ಷಗಾರರು ಇರಲಿಲ್ಲ ಎಂದರೆ ನಿಜ. ಸದರಿ ನಿಪಿ.33 ನೇದ್ದನ್ನು ಅವರಿಗೆ ಗೊತ್ತಾಗದಂತೆ ತಂದೆ ಮಕ್ಕಳು ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಸದರಿ ಆಸ್ತಿಗಳು ಅವರಿಗೆ ಸಂಬಂಧಿಸಿರಲಿಲ್ಲ ಹಾಗೂ ಅವರ ಹೆಸರುಗಳು ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಮೇಲೆ ಹೇಳಿದ ನಿಪಿ.33 ರಲ್ಲಿಯ ಆಸ್ತಿಗಳನ್ನು ಮೃತ 3 ನೇ ಪ್ರತಿವಾದಿ ಮತ್ತು 4 ನೇಪ್ರತಿವಾದಿಯರು ನಮ್ಮ ವ್ಯಾಪಾರದಿಂದ ಬಂದ ಜಂಟಿ ಆದಾಯದಿಂದ

ಖರೀದಿಸಿರುತ್ತೇವೆ ಎಂದು ಅದರಲ್ಲಿ ಒಕ್ಕಣೆ ಇರುತ್ತದೆಂದರೆ ನಿಜ. ಸದರಿ ಆಸ್ತಿಗಳು ನಮ್ಮ ಜಂಟಿ ಆದಾಯದದಿಂದ ಖರೀದಿಸಿದ ಆಸ್ತಿಗಳು ಇರುತ್ತವೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ನಿಜ ಆದರೆ ಸಾಕ್ಷಿ ಮುಂದುವರೆದು ದಾಖಲೆಗಳನ್ನು ನೋಡಬೇಕು ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳನ್ನು ನಮ್ಮ ಜಂಟಿ ಆದಾಯದಿಂದ ಖರೀದಿಸಿರುತ್ತೇವೆ ಯಾವ ಕಾರಣಕ್ಕಾಗಿ ಹೇಳಿ ಬರೆಸಿರುತ್ತೀರಿ? ಎಂದರೆ ಸಾಕ್ಷಿಯು ಸದರಿ ಆಸ್ತಿಗಳನ್ನು ನಮ್ಮ ಜಂಟಿ ಆದಾಯದಿಂದ ಖರೀದಿಸಿರುತ್ತೇವೆ ಎಂದು ನುಡಿಯುತ್ತಾರೆ. ಮೃತ 3 ನೇ ಪ್ರತಿವಾದಿ ಹಾಗೂ 3 (ಎ) ದಿಂದ 3(ಸಿ) ಪ್ರತಿವಾದಿಯರು, 4 ನೇ ಪ್ರತಿವಾದಿ ಹಾಗೂ ನನ್ನ ಪ್ರತಿವಾದ ಪತ್ರದಲ್ಲಿ ಸದರಿ ಆಸ್ತಿಗಳನ್ನು ನಾವೆಲ್ಲರೂ ಒಟ್ಟಿಗೆ ಖರೀದಿಸಿರುತ್ತೇವೆ ಎಂದು ಹೇಳಿ ಬರೆಸಿರುವುದಿಲ್ಲ ಎಂದರೆ ನಿಜ. ಸದರಿ ಆಸ್ತಿಗಳಲ್ಲಿ ವಾದಿಗೆ ಪಾಲು ಕೊಡಾರದೆಂಬ ಉದ್ದೇಶದಿಂದ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ನಗರ ಭೂಮಾಪಕರ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ನಮ್ಮ ಹೆಸರುಗಳನ್ನು ದಾಖಲಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನಿಪಿ.32 ಹಾಗೂ ನಿಪಿ.33 ರ ಆಧಾರದ ಮೇಲೆ ನಮಗೆ ಯಾವುದೇ ರೀತಿಯಾದ ಹಕ್ಕು, ಮಾಲೀಕತ್ವ ಪ್ರಾಪ್ತವಾಗಿರುವುದಿಲ್ಲ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿ ದಿ.07.02.2013 ರಂದು ತಮ್ಮ ವಕೀಲರ ಮೂಲಕ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾನೆಂದರೆ ನಿಜ. ಅದೇ ದಿನ ನಾನು ಸಹ 4 ನೇ ಪ್ರತಿವಾದಿಯ ಪ್ರತಿವಾದ ಪತ್ರವನ್ನು ಅಳವಡಿಸಿಕೊಳ್ಳಲು ವಕೀಲರ ಮೂಲಕ ಮೆಮೋ ಸಲ್ಲಿಸಿರುತ್ತೇನೆಂದರೆ ನಿಜ. ಅದೇ ರೀತಿ ಮೃತ 3 ನೇ ಪ್ರತಿವಾದಿಯು ಸಹ 2 ನೇ ಪ್ರತಿವಾದಿಯ ಪ್ರತಿವಾದ ಪತ್ರವನ್ನು ಅಳವಡಿಸಿಕೊಳ್ಳಲು ವಕೀಲರ ಮೂಲಕ ಮೆಮೋ ಸಲ್ಲಿಸಿರುತ್ತಾನೆಂದರೆ ನಿಜ. ನಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಆಸ್ತಿಗಳ

ಪೈಕಿ ಅನುಕ್ರಮ ಸಂಖ್ಯೆ-1, ಸರ್ವೆ ನಂಬರ -182/7 ಮತ್ತು ಅನುಕ್ರಮ ಸಂಖ್ಯೆ -5, ಸಿ ಟಿ ಎಸ್ ನಂಬರ 3226/ಎ ನೇದ್ದವುಗಳು ಪಿತ್ರಾರ್ಜಿತ ಆಸ್ತಿಗಳು ಇರುವ ಬಗ್ಗೆ ಹೇಳಿರುತ್ತೀರಿ ಎಂದರೆ ನಿಜ. ಅದೇ ರೀತಿ ಮುಂದುವರೆದು ಪ್ರತಿವಾದ ಪತ್ರದ ಖಂಡಿಕೆ 4 ರಲ್ಲಿಯೂ ಸಹ ಕೆಲವು ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಇರುವ ಬಗ್ಗೆ ಒಪ್ಪಿ ಕೊಂಡಿರುತ್ತೀರಿ ಎಂದರೆ ನಿಜ.

ಪ್ರತಿವಾದಿ ನಂಬರ 3(ಎ) ದಿಂದ (ಸಿ) ರವರು ದಿ.09.06.2022 ರಂದು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆಂದರೆ ನಿಜ. ಸದರಿಯವರು ನಮ್ಮ ತಂದೆ ತೀರಿಕೊಂಡ ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆಂದರೆ ನಿಜ. ಸದರೀಯವರ ಪ್ರತಿವಾದ ಪತ್ರದಲ್ಲಿ ಹೇಳಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರೀಯವರ ಪ್ರತಿವಾದ ಪತ್ರದ ಖಂಡಿಕೆ -5 ರಲ್ಲಿ ಹೇಳಿರುವ ಸಂಗತಿಗಳನ್ನು 3 ರಿಂದ 5ನೇ ಪ್ರತಿವಾದಿ ಪರ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂಬರ 3(ಎ) ರವರು ತಮ್ಮ ಪ್ರತಿವಾದ ಪತ್ರ ಸಲ್ಲಿಸುವ ಕಾಲಕ್ಕೆ ಮೃತ 3 ನೇ ಪ್ರತಿವಾದಿ ಹಾಗೂ ಉಳಿದ ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುವ ಸಂಗತಿಗಳ ಬಗ್ಗೆ ಅವಳಿಗೆ ಮಾಹಿತಿ ಇರಲಿಲ್ಲ. ಪ್ರತಿವಾದ ಪತ್ರ ಸಲ್ಲಿಸುವಾಗ ಅವರು ವಕೀಲರಿಗೆ ಮಾಹಿತಿ ಕೊಟ್ಟಿರುತ್ತಾರೋ ಅಥವಾ ಇಲ್ಲವೋ ಎಂದರೆ ಸಾಕ್ಷಿಯು ಪ್ರತಿವಾದ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆಂದು ನುಡಿಯುತ್ತಾರೆ. ಪ್ರತಿವಾದ ಪತ್ರದ ಖಂಡಿಕೆ 5 ರಲ್ಲಿ ಹೇಳಿರುವ ಸಂಗತಿಗಳು ಮೃತ 3 ನೇ ಪ್ರತಿವಾದಿ, 4 ಮತ್ತು 5 ನೇ ಪ್ರತಿವಾದಿಯರ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿಗಳಾದ ಸಿ ಟಿ ಎಸ್ ನಂಬರ 3200-ಎ/27, ಸಿ ಟಿ ಎಸ್ ನಂಬರ 936/ಬಿ , 858, 850 , 847/ಬಿ ನೇದ್ದವುಗಳನ್ನು ನನ್ನ ತಂದೆ ಅಂದರೆ ಮೃತ 3 ನೇ ಪ್ರತಿವಾದಿ ಲಕ್ಷ್ಮಣ ಖರೀದಿಸುವ ಕಾಲಕ್ಕೆ ಆತನ ಅಣ್ಣತಮ್ಮಂದಿರರ ಮಧ್ಯೆಯಾಗಲೀ, ನಮ್ಮ ಅಜ್ಜ ಈರಪ್ಪನ ಮಧ್ಯೆಯಾಗಲೀ ವಾಟ್ನಿಯಾದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ಸದರಿ ಆಸ್ತಿಗಳನ್ನು ಖರೀದಿಸುವ ಕಾಲಕ್ಕೆ ಜಂಟಿ ಕುಟುಂಬದ ಆದಾಯವನ್ನು ಹೊರತುಪಡಿಸಿ ಮೃತ 3 ನೇ ಪ್ರತಿವಾದಿಗೆ ಪ್ರತ್ಯೇಕವಾಗಿ ಆದಾಯ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನಿಜ.

ದಾವಾ ಆಸ್ತಿ ಸರ್ವೆ ನಂಬರ 182/7 ನೇದ್ದನ್ನು ಎಲ್ಲರೂ ಸೇರಿಯೇ ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿಯು ವಾದಿ ಒಬ್ಬನೇ ಮಾರಾಟ ಮಾಡಿರುತ್ತಾನೆಂದು ನುಡಿಯುತ್ತಾರೆ. ವಾದಿಗೆ ದಾವಾ ಆಸ್ತಿಗಳಲ್ಲಿ ಪಾಲು ಕೊಡಬೇಕಾಗುತ್ತದೆಂಬ ಉದ್ದೇಶದಿಂದ ಸುಳ್ಳು ಸಂಗತಿಗಳುಳ್ಳ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ